SHRI DHARMASTHALA MANJUNATHESHWARA UNIVERSITY

ADMISSIONS OPEN

Contactless Admission - Registration to Final Interview

APPLY ONLINE

Hon'ble Chancellor Dr. D. Veerendra Heggade

SDM COLLEGE OF MEDICAL SCIENCES & HOSPITAL, DHARWAD

UG Degree: MBBS
Duration: 4 Years 6 months +1 year internship.
Eligibility: NEET qualified and Admission through KEA Counselling. The College also offers MD/MS PG programmes in 22 specialities and Ph.D. Programmes.

B.Sc. in Medical Allied Sciences
Duration: 3 Years + 6 months internship.
Eligibility: 10+2/PUC or Equivalent with minimum 40% in PCBE. Lateral Entry to 2nd year of the Course for Diploma Candidates from 2020-21.
B. Sc. in Renal Dialysis Technology/ Medical Imaging Technology/Optometry/ Medical Laboratory Technology



Fellowship Programmes (Post MD/MS) Duration: 1 year
- Neonatal Intensive Care
- Gynaec Endoscopy
- Consultation Liaison Psychiatry
- Nephrology/Renal Dialysis
- ReproductiveMedicine
- Rhinology

PG Diploma in Cellular and Molecular Diagnostics

Certificate Course (Post MBBS)
Nephrology & Renal Dialysis (2 Years)

CERTIFICATE COURSES
- Blood Bank Technology (1 Year)
- Histo-Technician (6 Months)
- Advanced Cert. in Medical Micro Lab Technology (1 Year)



SDM COLLEGE OF DENTAL SCIENCES & HOSPITAL, DHARWAD
UG Degree: BDS | Duration : 4 Years + 1 year internship
Eligibility : NEET qualified and Admission through KEA Counseling.
The College also offers MDS Postgraduate degree in 9 specialities and Ph.D. Programmes.

STARTING SOON
- Fellowship in Cleft lip and palate
- Certificate Course in Oral Implantology
- Certificate Course in Forensic Odontology

Key Features: ▸ Accredited "A" Grade by NAAC ▸ Collaborations with International Universities ▸ State of the art facilities



SDM COLLEGE OF PHYSIOTHERAPY, DHARWAD
UG Degree: BPT
Duration : 4 Years+6 months internship
Eligibility: 10+2/PUC or Equivalent with minimum 45% PCB
MPT Postgraduate degree in 5 specialities and Ph.D. Programme

SDM INSTITUTE OF NURSING SCIENCES, DHARWAD

M.Sc. Nursing
Duration : 2 Years
Eligibility : 55% in B.Sc. with 1 Year experience or P.B. B.Sc.
- Medical Surgical Nursing
- Community Health
- Child Health
- Obstetrics & Gynaecology
- Mental Health & Psychiatric Nursing

B.Sc. Nursing
Duration : 4 Years
Eligibility : Must have passed 10+2 in Science with 45% aggregate in Physics, Chemistry, Biology & English

Diploma in Nursing (GNM)
Duration : 3 Years, Eligibility : Must have passed 10+2 or its equivalent with 40% aggregate preferably Science PCBE) or any other stream (Arts, Commerce) with English (Certified by Karnataka State Nursing Council)

SDM RESEARCH INSTITUTE FOR BIOMEDICAL SCIENCES (SDM RIBS), DHARWAD
M.Sc. (Biomedical Sciences) Duration: 2 Years (4 Semesters)
Eligibility: Must have passed bachelor's degree of min. 3 years duration in biomedical sciences (Biomedical Science / Biotechnology / Molecular Biology / Biochemistry / Microbiology / Botany / Zoology / Genetics / Home Science / Chemistry with Biological subjects)
or
Passed bachelor degree in BE / B.Tech majoring in biotechnology / Medical / Dental / B. Pharm / B.Sc. Nursing (3 or 4 years) / Pharmacology / Animal Sciences, Life Sciences from reputed and recognized University / Board with not less than 50% marks


## ವಿದ್ವಾನ್ ಟಿ.ಎಂ.ಕೃಷ್ಣ ಗಾಯನ ಇಂದು



ಮೈಸೂರು: ಮೈಸೂರಿನ ಶ್ರೀ ಪ್ರಸನ್ನ ವಿದ್ಯಾಗಣಪತಿ ಮಹೋತ್ಸವ ಚಾರಿಟಬಲ್ ಟ್ರಸ್ಟ್ (ಎಸ್‌ಪಿವಿಜಿಎಂಸಿ) ವತಿಯಿಂದ ಆಯೋಜಿಸಿರುವ 59ನೇ 'ಪಾರಂಪರಿಕ ಸಂಗೀತೋತ್ಸವ'ದಲ್ಲಿ ವಿದ್ವಾನ್ ಟಿ.ಎಂ. ಕೃಷ್ಣ ಅವರ ಗಾಯನ ಕಾರ್ಯಕ್ರಮ ಆ.24 ರಂದು ನಡೆಯಲಿದೆ.

'ಆನ್‌ಲೈನ್ ಕಾರ್ಯಕ್ರಮದಲ್ಲಿ ಟಿ.ಎಂ.ಕೃಷ್ಣ ಗಾಯನ ಆ.23 ರಂದು ಪ್ರಸಾರವಾಗಬೇಕಿತ್ತು, ಆದರೆ ತಾಂತ್ರಿಕ ಕಾರಣಗಳಿಂದ ಪ್ರಸಾರ ಸಾಧ್ಯವಾಗಿಲ್ಲ. ಸೋಮವಾರ ಸಂಜೆ 6 ರಿಂದ 8ರ ವರೆಗೆ ಪ್ರಸಾರ ಆಗಲಿದೆ' ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಲಿಂಕ್: www.facebook.com/spvgmc.trust.3 youtube-spvgmctrust ಮಾಹಿತಿಗೆ http://www.8thcrossganesha.org/ ವೀಕ್ಷಿಸಬಹುದು.

## ಮೈಸೂರು ಸಾಹಿತ್ಯ...

## 'ಆತ್ಮನಿರ್ಭ...

ಪ್ರಜಾವಾಣಿ ವಾರ್ತೆ

ಮೈಸೂರು: ಆತ್ಮನಿರ್ಭರ ಅಂದರೆ 'ಸ್ವಾವಲಂಬಿ ಭಾರತ' ಪರಿಕಲ್ಪನೆಯಡಿ ದೇಶದಲ್ಲಿ ಸಂಶೋಧನೆಗಳು ಹೆಚ್ಚಿ, ಆರ್ಥಿಕ ಅಭಿವೃದ್ಧಿಯು ವೇಗ ಪಡೆದುಕೊಳ್ಳಬೇಕು ಎಂದು ಉದ್ಯಮಿ, ಕಿರ್ಲೋಸ್ಕರ್ ಸಿಸ್ಟಮ್ಸ್ ಮುಖ್ಯಸ್ಥ ವಿಕ್ರಮ್ ಕಿರ್ಲೋಸ್ಕರ್ ಹೇಳಿದರು.

ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಹಾಗೂ ಮೈಸೂರು ಬುಕ್ ಕ್ಲಬ್-2015 ಸಹಯೋಗದೊಂದಿಗೆ ಆಯೋಜಿಸಿರುವ 'ಮೈಸೂರು ಸಾಹಿತ್ಯ ಸಂಭ್ರಮ-2020' ಆನ್‌ಲೈನ್ (ವರ್ಚುವಲ್ ಸರಣಿ) ಕಾರ್ಯಕ್ರಮದಲ್ಲಿ ಭಾನುವಾರ ಅವರು ಮಾತನಾಡಿದರು. ಲೇಖಕ ಅರೂಣ್ ರಾಮನ್ ಅವರು ಸಂವಾದ ನಡೆಸಿಕೊಟ್ಟರು.


Medifeet
MCP - Ortho & Diabetes Friendly Soft Footwear
Authorised Dealer
BUY 2
- FR

ಪರೀಕ್ಷಾರ್ಥಿಗಳು ಹಾಗೂ ಪರೀಕ್ಷಾ ಸಿಬ್ಬಂದಿ ಹೊರತುಪಡಿಸಿ ಅನಧಿಕೃತ ವ್ಯಕ್ತಿಗಳು ಸಂಚರಿಸಬಾರದು ಮತ್ತು ಯಾರೂ ಆಕ್ಷೇಪಾರ್ಹ ವಸ್ತುಗಳನ್ನು ಒಯ್ಯಬಾರದು ಎಂದು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಿಇಟಿ: ಬೇಸ್ ವಿದ್ಯಾರ್ಥಿಗಳ ಸಾಧನೆ

ಮೈಸೂರು: ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ (ಸಿಇಟಿ) ಬೇಸ್ ಎಜುಕೇಷನಲ್ ಸರ್ವೀಸಸ್ ಸಂಸ್ಥೆಯ ವಿದ್ಯಾರ್ಥಿಗಳು ಉತ್ತಮ ಸಾಧನೆ ತೋರಿದ್ದಾರೆ.

ಎಂ.ರಕ್ಷಿತ್ ಅವರು ಎಂಜಿನಿಯರಿಂಗ್‌ನಲ್ಲಿ ಮೊದಲ ರ್‍ಯಾಂಕ್ ಪಡೆದುಕೊಂಡಿದ್ದಾರೆ. ಮೈಸೂರಿನ ಕೆ.ಸಂಜನಾ ಕೃಷಿ ವಿಜ್ಞಾನದಲ್ಲಿ 2ನೇ ರ್‍ಯಾಂಕ್, ಎಂ.ಶಶಾಂಕ್ ಬಾಲಾಜಿ ಎಂಜಿನಿಯರಿಂಗ್‌ನಲ್ಲಿ 3ನೇ ರ್‍ಯಾಂಕ್ ಹಾಗೂ ದೀಪಿಕ್ ಎಸ್.ಪಾಟೀಲ್ 10ನೇ ರ್‍ಯಾಂಕ್ ಗಳಿಸಿದ್ದಾರೆ.

ಕೋವಿಡ್-19 ಸಂಕಷ್ಟದ ಸಮಯದಲ್ಲೂ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸಂಸ್ಥೆಯ ಕಾರ್ಯ ನಿರ್ವಾಹಕ ನಿರ್ದೇಶಕರಾದ ಅನಂತ್ ಕುಲಕರ್ಣಿ ಅವರು ಅಭಿನಂದಿಸಿದ್ದಾರೆ.

ಬೆಂಗಳೂರಿನಲ್ಲಿ ಕೇಂದ್ರ ಕಚೇರಿ ಹೊಂದಿರುವ ಸಂಸ್ಥೆಯು ಮೈಸೂರು, ತುಮಕೂರು, ಹಾಸನ, ಹುಬ್ಬಳ್ಳಿ, ಶಿವಮೊಗ್ಗ, ಉಡುಪಿಯಲ್ಲಿ ಕಾಲೇಜುಗಳು ಮತ್ತು ತರಬೇತಿ ಕೇಂದ್ರಗಳನ್ನು ಹೊಂದಿದೆ ಎಂದು ಪ್ರಕಟಣೆ ತಿಳಿಸಿದೆ.

# ಮಾರಾಟವಾಗದ ಅಲಂಕಾರಿಕ ವಸ್ತುಗಳು, ಸಂಕಷ್ಟದಲ್ಲಿ ವ

• ಕೆ.ಎಸ್.ಗಿರೀಶ

ಮೈಸೂರು: ಈ ಬಾರಿ ಗೌರಿ ಗಣೇಶ ಹಬ್ಬ ತನ್ನ ಎಂದಿನ ಕಳೆಯನ್ನು ಕಳೆದುಕೊಂಡಿದೆ. ಬೀದಿಬೀದಿಗಳಲ್ಲಿ ಗಣಪತಿ ವಿಗ್ರಹ ಪ್ರತಿಷ್ಠಾಪನೆ ಮಾಡುವುದಕ್ಕೆ ನಿರ್ಬಂಧ ಹೇರಿರುವುದರಿಂದ ಹಿಂದಿನ ವಿಜೃಂಭಣೆ ಈಗ ಮಾಯವಾಗಿದೆ.

ಹಿಂದಿನ ವರ್ಷವೆಲ್ಲ ಕನಿಷ್ಠ ಒಂದು ಬೀದಿಗೆ ಒಂದು ಗಣೇಶ ವಿಗ್ರಹವಾದರೂ ಪ್ರತಿಷ್ಠಾಪನೆಗೊಳ್ಳುತ್ತಿತ್ತು. ಈಗ ಎಲ್ಲೂ ಪೆಂಡಾಲ್ ಗಣೇಶ ಕಾಣಸಿಗುತ್ತಿಲ್ಲ. ಇದರಿಂದಾಗಿ ಕೇವಲ ಗಣೇಶ ಮೂರ್ತಿ ತಯಾರಕರು ಹಾಗೂ ಮಾರಾಟಗಾರರಿಗೆ ಮಾತ್ರವಲ್ಲ, ಅಲಂಕಾರಿಕ ವಸ್ತುಗಳ ಮಾರಾಟಗಾರರ ಮೇಲೂ ಪರಿಣಾಮ ಬೀರಿದೆ.

ಅಲಂಕಾರಿಕ ವಸ್ತುಗಳು ಇಡೀ ವರ್ಷದಲ್ಲಿ ಅತ್ಯಂತ ಹೆಚ್ಚು ಮಾರಾಟವಾಗುತ್ತಿದ್ದದ್ದು ಇದೇ ಅವಧಿಯಲ್ಲಿ. ಗಣೇಶ ಮೂರ್ತಿಯನ್ನು

**ಮುಖ್ಯಾಂಶಗಳು**

- ನಗರದಲ್ಲಿ ಗಣಪತಿ ದೇಗುಲಗಳಲ್ಲಿ ಸಿಂಗಾರ
- ಗೌರಿ ಹಬ್ಬದ ಪ್ರಯುಕ್ತ ಬಾಗಿನ ಕೊಟ್ಟ ಮಹಿಳೆಯರು
- ಹೂವು, ಹಣ್ಣುಗಳ ಭರ್ಜರಿ ವ್ಯಾಪಾರ

ಕೂರಿಸುವ ಪೆಂಡಾಲ್ ಮತ್ತು ಚಪ್ಪರದಲ್ಲಿ ಹಾಕಲಾಗುತ್ತಿದ್ದ ವಿವಿಧ ಬಗೆಯ ಅಲಂಕಾರಿಕ ವಸ್ತುಗಳನ್ನು ಖರೀದಿಸುವವರೇ ಇಲ್ಲದ ಸ್ಥಿತಿ ಮಾರುಕಟ್ಟೆಯಲ್ಲಿದೆ.

ಪೇಪರ್ ಹೂಗಳು, ಚಿತ್ರ, ಬಂಟಿಂಗ್‌ಗಳು, ಪೇಪರ್ ಫ್ಯಾನು ಸೇರಿದಂತೆ ವಿವಿಧ ಬಗೆಯ ಅಲಂಕಾರಿಕ ವಸ್ತುಗಳ ಮಾರಾಟ ಕುಸಿದಿದೆ. ಈ ವಸ್ತುಗಳನ್ನು ಮಾರಾಟ ಮಾಡುವವರಿಗೆ ಈ ಹಬ್ಬದಲ್ಲೇ ಭರಪೂರ ವ್ಯಾಪಾರವಾಗುತ್ತಿತ್ತು. ಆದರೆ, ಈಗ ಇವರೆಲ್ಲ ಪರದಾಡುವಂತಹ ಸ್ಥಿತಿ



ಮೈಸೂರಿನ ಶಿವರಾಮಪೇಟೆಯಲ್ಲಿ ಅಲಂಕಾರಿಕ ವಸ್ತು

ನಿರ್ಮಾಣವಾಗಿದೆ.

ಅಲಂಕಾರಿಕ ವಸ್ತುಗಳ ಮಾರಾಟ ಅಕ್ಷರಶಃ ಕುಸಿದಿದೆ. ಅಂಗಡಿಯ ಬಾಡಿಗೆ, ಕೆಲಸಗಾರರ ಸಂಬಳವನ್ನೂ ಪಾವತಿ ಮಾಡದಷ್ಟು ಕಷ್ಟಕರವಾಗಿದೆ. ವರಮಹಾಲಕ್ಷ್ಮೀ ಹಬ್ಬದಲ್ಲೂ ವ್ಯಾಪಾರವಾಗಲಿಲ್ಲ.

# ಪಾರಂಪರಿಕ ಸಂಗೀತೋತ್ಸವ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಮೈಸೂರು: ಮೈಸೂರಿನ ಶ್ರೀ ಪ್ರಸನ್ನ ವಿದ್ಯಾಗಣಪತಿ ಮಹೋತ್ಸವ ಚಾರಿಟಬಲ್ ಟ್ರಸ್ಟ್ (ಎಸ್‌ಪಿವಿಜಿಎಂಸಿ) ವತಿಯಿಂದ ಆ.23ರಿಂದ 31ರವರೆಗೆ ಆನ್‌ಲೈನ್ ವೇದಿಕೆಯಲ್ಲಿ 59ನೇ 'ಪಾರಂಪರಿಕ ಸಂಗೀತೋತ್ಸವ' ನಡೆಯಲಿದೆ.

ಪ್ರತಿದಿನ ಸಂಜೆ 6 ಗಂಟೆಗೆ ಕಾರ್ಯಕ್ರಮ ಶುರುವಾಗಲಿದೆ. 23ರಂದು ವಿದ್ವಾನ್ ಟಿ.ಎಂ.ಕೃಷ್ಣ 24ರಂದು ಸಿಕ್ಕಿಲ್ ಗುರುಚರಣ್ ಅವರಿಂದ ಗಾಯನ ಕಾರ್ಯಕ್ರಮ, 25ರಂದು ವಿದ್ವಾನ್ ಜೆ.ಬಿ.ಶ್ರುತಿ ಸಾಗರ್ ಅವರಿಂದ ಕೊಳಲು ವಾದನ, 26ರಂದು ವಿದ್ವಾನ್ ವಿಘ್ನೇಶ್ ಈಶ್ವರ್ ಅವರಿಂದ ಗಾಯನ, 27ರಂದು ವಿದ್ವಾನ್ ಋತ್ವಿಕ್ ರಾಜಾ ಅವರಿಂದ ಗಾಯನ, 28ರಂದು ವಿದುಷಿ ಅಕ್ಕರೈ ಸಹೋದರಿಯರಿಂದ ವಯಲಿನ್ ವಾದನ, 29ರಂದು ವಿದ್ವಾನ್ ವಿವೇಕ ಸದಾಶಿವಂ ಅವರಿಂದ ಗಾಯನ ಕಾರ್ಯಕ್ರಮ ನಡೆಯಲಿದೆ.

ಕೋವಿಡ್ ಕಾರಣ ಈ ಬಾರಿ ಮೈಸೂರಿನ ವಿ.ವಿ.ಮೊಹಲ್ಲಾದ ಎಂಟನೇ ಕ್ರಾಸ್‌ನಲ್ಲಿ ಯಾವುದೇ ಕಾರ್ಯಕ್ರಮಗಳು ಇರುವುದಿಲ್ಲ. ಗಣಪತಿ ಮೂರ್ತಿಯನ್ನೂ ಇಡುವುದಿಲ್ಲ. ಪ್ರಸಿದ್ಧ ಸಂಗೀತಗಾರರು ನೀಡುವ ಕಾರ್ಯಕ್ರಮಗಳನ್ನು ನಿತ್ಯ ಸಂಜೆ 6 ಗಂಟೆಯಿಂದ 8 ಗಂಟೆವರೆಗೆ ಫೇಸ್‌ಬುಕ್ ಹಾಗೂ ಯೂಟ್ಯೂಬ್‌ನಲ್ಲಿ ಪ್ರಸಾರ ಮಾಡಲಾಗುತ್ತದೆ.

ಲಿಂಕ್: www.facebook.com/spvgmc.trust.3 youtube-spvgmctrust, ಮಾಹಿತಿ http://www.8thcrossganesha.org/ ವೀಕ್ಷಿಸಬಹುದು.

**ಸ್ವಚ್ಛ ಸರ್ವೇಕ್ಷಣ್ 2020ರ ಪ್ರಶಸ್ತಿ**

# ನಾಗರಿಕ ಪ್ರತಿಕ್ರಿಯೆ ವಿಭಾಗ: ಎಚ್‌.ಡಿ.ಕೋಟೆ ಪ್ರಥಮ

ಪ್ರಜಾವಾಣಿ ವಾರ್ತೆ

ಎಚ್.ಡಿ.ಕೋಟೆ: 25 ಸಾವಿರ ಜನಸಂಖ್ಯೆಯುಳ್ಳ ನಗರಗಳಲ್ಲಿ ಉತ್ತಮ ನಾಗರಿಕ ಪ್ರತಿಕ್ರಿಯೆ ವಿಭಾಗದಲ್ಲಿ ಪ್ರಥಮಸ್ಥಾನ ಪಡೆದು ಎಚ್.ಡಿ.ಕೋಟೆ ಪುರಸಭೆ ರಾಷ್ಟ್ರೀಯ ಪ್ರಶಸ್ತಿ ಗಳಿಸಿದೆ ಎಂದು ಪುರಸಭಾ ಮುಖ್ಯಾಧಿಕಾರಿ ಡಿ.ಎನ್.ವಿಜಯ್ ಕುಮಾರ್ ತಿಳಿಸಿದ್ದಾರೆ.

ಮೈಸೂರು ಅರಮನೆ ಆವರಣದಲ್ಲಿ ಗುರುವಾರ ನಡೆದ ಆನ್‌ಲೈನ್ ಕಾರ್ಯಕ್ರಮದಲ್ಲಿ ಪ್ರಶಸ್ತಿ ನೀಡಲಾಯಿತು ಎಂದು ತಿಳಿಸಿದರು.

ಭಾರತ ಸರ್ಕಾರದ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಾಲಯದಿಂದ ಸ್ವಚ್ಛ ಸರ್ವೇಕ್ಷಣ್ 2020ರ ಸ್ವಚ್ಛ ಸರ್ವೇಕ್ಷಣ್ ಪ್ರಶಸ್ತಿ ಪ್ರಕಟಿಸಲಾಗಿದ್ದು, ಸಮೀಕ್ಷೆಯಲ್ಲಿ ದೇಶದಾದ್ಯಂತ 4,246 ಸ್ಥಳೀಯ ಸಂಸ್ಥೆಗಳು ಭಾಗವಹಿಸಿದ್ದವು. ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಸ್ಥಳೀಯ ಸಂಸ್ಥೆಗಳನ್ನು 4 ವಲಯಗಳಾಗಿ ವಿಂಗಡಿಸಲಾಗಿದ್ದು, ಇದರಲ್ಲಿ ದಕ್ಷಿಣ



ಮೈಸೂರು ಅರಮನೆ ಆವರಣದಲ್ಲಿ ಗುರುವಾರ ನಡೆದ ಆನ್ ಲೈನ್ ಕಾರ್ಯಕ್ರಮದಲ್ಲಿ ಎಚ್‌ಡಿ.ಕೋಟೆ ಪುರಸಭೆಗೆ ಉತ್ತಮ ನಾಗರಿಕ ಪ್ರತಿಕ್ರಿಯೆ ಪ್ರಶಸ್ತಿ ವಿಭಾಗದಲ್ಲಿ ಪ್ರಥಮ ಸ್ಥಾನ ದೊರೆತಿದೆ

ಭಾರತದ ರಾಜ್ಯಗಳ ವಲಯದಲ್ಲಿ ಎಚ್.ಡಿ.ಕೋಟೆ ಪುರಸಭೆಯು ಭಾಗವಹಿಸಿತ್ತು ಎಂದು ಮಾಹಿತಿ ನೀಡಿದರು.

ಈ ಸಮೀಕ್ಷೆಯು 2019ರ ಆಗಸ್ಟ್‌ನಿಂದ 2020 ಫೆಬ್ರವರಿ ತಿಂಗಳವರೆಗೆ ನಡೆದಿತ್ತು, ಈ ಅವಧಿಯಲ್ಲಿ ಮನೆ - ಮನೆ ಕಸ ಸಂಗ್ರಹಣೆ, ವೈಯಕ್ತಿಕ ಮತ್ತು ಸಾಮೂಹಿಕ ಶೌಚಾಲಯಗಳ ನಿರ್ಮಾಣ, ರಾತ್ರಿ ಪಾಳಿಯದಲ್ಲಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸ್ವಚ್ಛತೆ ಕಾರ್ಯ, ಪಟ್ಟಣವನ್ನು ಸುಂದರವಾಗಿಸಲು ಗಿಡ ನೆಡುವಿಕೆ ಕಾರ್ಯಕ್ರಮ, ಉದ್ಯಾನಗಳ ಅಭಿವೃದ್ಧಿ, ಕಸ ಬಿಸಾಡುವ ಸ್ಥಳದಲ್ಲಿ ಸುಂದರಗೊಳಿಸಲು ಬೆಂಚು ಅಳವಡಿಸುವಿಕೆ, ಪ್ಲಾಸ್ಟಿಕ್ ನಿಷೇಧ, ಸ್ವಚ್ಛತಾ ಅಪ್ಲಿಕೇಷನ್ ಮೂಲಕ ದೂರುಗಳ ಸಲ್ಲಿಕೆ ಮತ್ತು ಪರಿಹಾರ ಹಾಗೂ ಪಟ್ಟಣದ ಸ್ವಚ್ಛತೆಯಲ್ಲಿ ಖಾಸಗಿ, ಸಾರ್ವಜನಿಕ ಸಹಭಾಗಿತ್ವ ಮತ್ತು ಪಟ್ಟಣದ ಸ್ವಚ್ಛತೆಗೆ ಸಂಬಂಧಿಸಿದಂತೆ ನಾಗರಿಕರ ಪ್ರತಿಕ್ರಿಯೆ - ಹೀಗೆ ಹಲವು ಅಂಶಗಳಲ್ಲಿ ಸಮೀಕ್ಷೆ ನಡೆಸಿದ್ದು ಈ ಸ್ಪರ್ಧೆಯಲ್ಲಿ ಎಚ್.ಡಿ.ಕೋಟೆ ಪುರಸಭೆಯು ಎರಡನೇ ಸ್ವಚ್ಛ ನಗರವಾಗಿ ಹೊರಹೊಮ್ಮಿದೆ ಎಂದು ಹೇಳಿದರು.

ಉಪ ವಿಭಾಗಾಧಿಕಾರಿ ವೀಣಾ, ಯೋಜನಾ ನಿರ್ದೇಶಕ ಲೋಕನಾಥ್, ಮುಖ್ಯಾಧಿಕಾರಿ ಡಿ.ಎನ್.ವಿಜಯ್ ಕುಮಾರ್, ಪುರಸಭಾ ಕಂದಾಯ ಅಧಿಕಾರಿ ಪಿ.ಎನ್.ಸುರೇಶ್, ಪರಮೇಶ್, ಪರಿಸರ ಎಂಜಿನಿಯರ್ ತೇಜಸ್ವಿನಿ, ಪುಷ್ಪಲತಾ, ಸಂತೋಷ್, ಹರೀಶ್, ರಘು, ರಾಮಸ್ವಾಮಿ, ಸತ್ಯಕುಮಾರ್ ಇದ್ದರು.



(ಚಿತ್ರ). ಕಾನೂನು

# ...ೕರಿಸಿ

## ...ಪ್ರತಿಭಟನೆ

...ಳಿ ಪ್ರತಿಭಟಿಸಿತು. ... ವರ್ಷದ ... ಹೊರತುಪಡಿಸಿ, ... ಪರೀಕ್ಷೆ ನಡೆಸದೆ ...ಸಲು ಯುಜಿಸಿ ... ಆದರೆ ಕಾನೂನು ... ಕೋವಿಡ್ ... ವಿದ್ಯಾರ್ಥಿಗಳಿಗೆ ...ಮಾಡುತ್ತಿದೆ ಎಂದು ...ರು ದೂರಿದರು. ...ಯುವ ಜಿಲ್ಲಾ ಘಟಕದ ...ಅಲಿ ಪ್ರತಿಭಟನೆ ನೇತೃತ್ವ

## ...ರ: ವೃದ್ಧನಿಗೆ ...ವಧಿ ಶಿಕ್ಷೆ

...ಕಿ ಮೇಲಿನ ಅತ್ಯಾಚಾರ ... ಸಾಬೀತಾಗಿದ್ದರಿಂದ, ... ವೃದ್ಧ ಚೆಂಗಲಯ್ಯ ...ನಗರದ 4ನೇ ಹೆಚ್ಚುವರಿ ... ಸೆಷನ್ಸ್ ನ್ಯಾಯಾಲಯ ...ಜೀವಾವಧಿ ಶಿಕ್ಷೆ ವಿಧಿಸಿ ...ಿದೆ.

# ಟಿ.ಎಂ.ಕೃಷ್ಣ ಗಾಯನ ಮೋಡಿ

ಪ್ರಜಾವಾಣಿ ವಾರ್ತೆ

ಮೈಸೂರು: ಶ್ರೀ ಪ್ರಸನ್ನ ವಿದ್ಯಾಗಣಪತಿ ಮಹೋತ್ಸವ ಚಾರಿಟಬಲ್ ಟ್ರಸ್ಟ್ (ಎಸ್‌ಪಿವಿಜಿಎಂಸಿ) ಆಯೋಜಿಸಿರುವ 59ನೇ 'ಪಾರಂಪರಿಕ ಸಂಗೀತೋತ್ಸವ'ದ ಆನ್‌ಲೈನ್ ವೇದಿಕೆ ಮೂಲಕ ಸೋಮವಾರ ವಿದ್ವಾನ್ ಟಿ.ಎಂ.ಕೃಷ್ಣ ಪ್ರಸ್ತುತಪಡಿಸಿದ ಗಾಯನವು ಸಂಗೀತ ಪ್ರೇಮಿಗಳ ಮನಸೆಳೆಯಿತು.

ಯೂಟ್ಯೂಬ್‌ನಲ್ಲಿ ಮೂಡಿಬಂದ ಕಾರ್ಯಕ್ರಮದಲ್ಲಿ ಅವರು ಮುಖ್ಯವಾಗಿ ಶಂಕರಾಭರಣಂ, ಆನಂದಭೈರವಿ, ಕರಹರಪ್ರಿಯ, ಸಿಂಧೂ ಭೈರವಿ ರಾಗಗಳಲ್ಲಿ ಸುಮಾರು ಎರಡು ಗಂಟೆ ಸಂಗೀತ ಕಛೇರಿ ನೀಡಿದರು. ಅವರಿಗೆ ಪಕ್ಕವಾದ್ಯದಲ್ಲಿ ವಿದುಷಿ ಅಕ್ಕರೈ ಸುಬ್ಬಲಕ್ಷ್ಮಿ (ಪಿಟೀಲು), ವಿದ್ವಾನ್ ಅರುಣ್ ಪ್ರಕಾಶ್ (ಮೃದಂಗ) ಹಾಗೂ ವಿದ್ವಾನ್ ಎನ್.ಗುರುಪ್ರಸಾದ್ (ಘಟ) ಸಾಥ್ ನೀಡಿದರು.

ಆನ್‌ಲೈನ್ ವೇದಿಕೆಯಲ್ಲಿ ಟಿ.ಎಂ. ಕೃಷ್ಣ ಅವರ ಗಾಯನ ಆ.23 ರಂದು ಪ್ರಸಾರವಾಗಬೇಕಿತ್ತು, ತಾಂತ್ರಿಕ ಕಾರಣಗಳಿಂದ ಮುಂದೂಡಲಾಗಿತ್ತು.

ಇಂದು ಕೊಳಲು ವಾದನ: ಮಂಗಳವಾರ ಸಂಜೆ 6ರಿಂದ 8 ಗಂಟೆವರೆಗೆ ವಿದ್ವಾನ್ ಜೆ.ಬಿ.ಶ್ರುತಿ ಸಾಗರ್ ಅವರಿಂದ ಕೊಳಲು ವಾದನ ನಡೆಯಲಿದ್ದು, ಯೂಟ್ಯೂಬ್‌ನಲ್ಲಿ ಮೂಡಿಬರಲಿದೆ. ಇವರಿಗೆ ಪಕ್ಕವಾದ್ಯದಲ್ಲಿ ವಿದ್ವಾನ್ ಬಿ.ಅನಂತಕೃಷ್ಣನ್ (ಪಿಟೀಲು), ವಿದ್ವಾನ್ ನೇವೇಲಿ ನಾರಾಯಣನ್ (ಮೃದಂಗ), ವಿದ್ವಾನ್ ಚಂದ್ರಶೇಖರ್ ಶರ್ಮ (ಘಟ) ಸಾಥ್ ನೀಡಲಿದ್ದಾರೆ.

ಲಿಂಕ್: www.facebook.com/spvgmc.trust.3 youtube-spvgmctrust

ಮಾಹಿತಿಗೆ http://www.8thcrossganesha.org/ ವೀಕ್ಷಿಸಬಹುದು.



ಗಾಯಕ ವಿದ್ವಾನ್ ಟಿ.ಎಂ.ಕೃಷ್ಣ ಅವರು ಸೋಮವಾರ ಆನ್‌ಲೈನ್ ವೇದಿಕೆ ಮೂಲಕ ಗಾಯನ ಪ್ರಸ್ತುತಪಡಿಸಿದರು

# 'ಪರಿಸರ ನೀತಿಯನ್ನೇ ಬುಡಮೇಲು ಮಾಡಲಿದೆ ಇಐಎ'

ಬೆಂಗಳೂರು: 'ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಇತ್ತೀಚೆಗೆ ಹೊರಡಿಸಿರುವ 'ಪರಿಸರ ಪರಿಣಾಮ ನಿರ್ಧಾರಣೆ (ಇಐಎ)' ಕರಡು ಅಧಿಸೂಚನೆ ಇದುವರೆಗಿನ ದೇಶದ ಪರಿಸರ ನೀತಿಯನ್ನೇ ಬುಡಮೇಲು ಮಾಡುತ್ತದೆ' ಎಂದು ಸಿಪಿಐ (ಎಂ) ಪಾಲಿಟ್ ಬ್ಯೂರೊ ಸದಸ್ಯೆ ಬೃಂದಾ ಕಾರಟ್ ಸೋಮವಾರ ಅಭಿಪ್ರಾಯಪಟ್ಟರು.

ಕಮ್ಯುನಿಸ್ಟ್ ನಾಯಕ ಎಸ್. ಸೂರ್ಯನಾರಾಯಣ ರಾವ್ ಅವರ 96ನೇ ಜನ್ಮದಿನಾಚರಣೆ ಅಂಗವಾಗಿ 'ಪರಿಸರ ಪರಿಣಾಮ ಅಂದಾಜು–2020' ವಿಷಯ ಕುರಿತು ಆನ್‌ಲೈನ್ ಉಪನ್ಯಾಸ ನೀಡಿದ ಅವರು, 'ವ್ಯವಹಾರವನ್ನು ಸುಲಲಿತವಾಗಿ ಮಾಡಲು ಈ ನೀತಿ ಎನ್ನುವ ಕೇಂದ್ರ ಸರ್ಕಾರ, ಲೂಟಿಯನ್ನು ಸುಲಲಿತಗೊಳಿಸಲು ಈ ಕರಡು ನೀತಿ ತಂದಿದೆ' ಎಂದು ದೂರಿದರು.

'ಅವರೆಗೆ ಪರಿಸರ ಸಂರಕ್ಷಣೆಗೆ ದೇಶದ ಬದ್ಧತೆ ಏನಿತ್ತೊ ಅದಕ್ಕೆ ಪೂರ್ಣವಾಗಿ ಈ ಕರಡು ತಿಲಾಂಜಲಿ ನೀಡಲಿದೆ. ಪರಿಸರಕ್ಕೆ ಸಂಬಂಧಿಸಿ ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಗೆ ಹೋಗುವ ಅವಕಾಶವನ್ನೂ ನಿರ್ಬಂಧಿಸಲಿದೆ' ಎಂದರು.

'ಹೊಸ ಉದ್ದಿಮೆಗಳು, ಕೈಗಾರಿಕೆಗಳು, ಯೋಜನೆಗಳ ಅನುಷ್ಠಾನ ಮಾಡುವಾಗ ಪರಿಸರ ಸಂರಕ್ಷಣೆಯನ್ನೂ ಪ್ರಧಾನವಾಗಿ ಗಮನದಲ್ಲಿ ಇಟ್ಟುಕೊಳ್ಳಬೇಕು ಎಂಬ ಆಶಯವನ್ನೇ ಈ ನೀತಿ ಗೌಣವಾಗಿಸುತ್ತದೆ. ಅಲ್ಲದೆ, ಪರಿಸರದ ಮೇಲಿನ ಹಾನಿ ಅಂದಾಜು ಮಾಡುವ ವಿಷಯದಲ್ಲಿ ಜನರ ಭಾಗವಹಿಸುವಿಕೆಯನ್ನೂ ಸಂಪೂರ್ಣವಾಗಿ ಇಲ್ಲದಂತೆ ಮಾಡುತ್ತದೆ' ಎಂದೂ ಅಭಿಪ್ರಾಯಪಟ್ಟರು.

...ನ ನಡೆಯುತ್ತಿದ್ದ ಸಂಭ್ರಮೋತ್ಸವ; ಕಾರಂಜಿ ಕೆರೆಯಲ್ಲಿ ವಿಸರ್ಜನಾ ಮಹೋತ್ಸವ

# ...ಸೂರಿನ ಗತ ವೈಭವ: ಈ ಗಣೇಶೋತ್ಸವ

...ಗರಾಜ

'ನೂರೊಂದು ... ನಾಲ್ಕೈದು ದಶಕದ ...ರಿಗರ ಮನೆ ಮಾತಿನ ... 40 ದಿನವೂ ... ವಿಜೃಂಭಣೆಯಿಂದ ... ಎಲ್ಲರನ್ನೂ ತನ್ನತ್ತ ... ಆಕರ್ಷಿಸುತ್ತಿತ್ತು. ...ರದ ದೊಡ್ಡ ಉತ್ಸವವೂ ... ಸನ್ನಿಧಿಯಲ್ಲಿ ನಿತ್ಯ ರಾತ್ರಿ ...ವರ ನಾಮ, ಸುಗಮ ...ಟಕ ಸೇರಿದಂತೆ ಇನ್ನಿತರ ...ರ್ಶನವೂ ನಿರಂತರವಾಗಿ ... ಮರು ಇಲ್ಲಿ ತಮ್ಮ ಕಲೆ ...ದ್ದರು. ವರ್ಷದಿಂದ ...ಣೇಶೋತ್ಸವದ ವೈಭವ ...ಡಿತ್ತು. ಭಾದ್ರಪದ ... ರಾತ್ರಿಗಳನ್ನು ಇಲ್ಲಿಯೇ ...ವರ ಸಂಖ್ಯೆ ಅಸಂಖ್ಯಾತ... ...ಲ್ಲವೂ ನೆನಪಷ್ಟೇ. ಗತ ... ಕುರಿತು: 'ಪದ್ಮಾ ...



ಮೈಸೂರಿನ ಪದ್ಮಾ ಟಾಕೀಸ್ ಮುಂಭಾಗವಿರುವ ನೂರೊಂದು ಗಣಪತಿ

**ಗಣೇಶನ ಆರಾಧನೆ 40 ದಿನದ ಬದಲು ವರ್ಷವಿಡಿ ನಡೆಯಲಿ ಎಂದು ಮೂವರು ಮಠಾಧೀಶರು ಪ್ರೇರಣೆ ನೀಡಿದ್ದರಿಂದಲೇ ನೂರೊಂದು ಗಣಪತಿ ದೇಗುಲವಿದೆ**

**ಸುನೀಲ್‌ಕುಮಾರ್ ಶಾಸ್ತ್ರಿ**, ಅರ್ಚಕ

ನೀಡಿದರು. ಇದರ ಜೊತೆಗೆ 101 ಬಹುಮಾನಗಳ ಲಾಟರಿ ಆರಂಭಿಸಿದರು. ಕಾರಂಜಿ ಕೆರೆಯಲ್ಲಿ ಗಣೇಶನ ಮೂರ್ತಿಗಳನ್ನು ...

ಪಸರಿಸಿತು. 1980ರಲ್ಲಿ ಬೆಳ್ಳಿ ಮಹೋತ್ಸವ ಆಚರಣೆಗೊಂಡಿತು. ಸುತ್ತೂರಿನ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ, ಸಿದ್ಧಗಂಗೆಯ ಶಿವಕುಮಾರ ಸ್ವಾಮೀಜಿ, ಆದಿಚುಂಚನಗಿರಿಯ ಬಾಲಗಂಗಾಧರನಾಥ ಸ್ವಾಮೀಜಿ ಈ ಉತ್ಸವದಲ್ಲಿ ಪಾಲ್ಗೊಂಡು, ನೂರೊಂದು ಗಣಪತಿಯ ಶಾಶ್ವತ ದೇಗುಲ ನಿರ್ಮಿಸುವಂತೆ ಪ್ರೇರಣೆ ನೀಡಿದರು. ಮೂವರು ಸ್ವಾಮೀಜಿಗಳ ...

**ಗಣೇಶೋತ್ಸವಕ್ಕೆ ಏಳು ದಶಕದ ಇತಿಹಾಸವಿದೆ. ಇದೀಗ ನೂರೊಂದು ಗಣಪತಿ ದೇಗುಲವಾಗಿದೆ. ಇಲ್ಲಿ ಈಶ್ವರ, ಪಾರ್ವತಿ, ಸುಬ್ರಹ್ಮಣ್ಯ ದೇಗುಲವೂ ಉಂಟು**

**ಬಿ.ವಿ.ಮಂಜುನಾಥ್**, ಪಾಲಿಕೆ ಸದಸ್ಯ

**ದೇಗುಲದ 39ನೇ ವಾರ್ಷಿಕೋತ್ಸವ ನಡೆದಿದೆ. ಈ ಬಾರಿ ಕೋವಿಡ್‌ನಿಂದ ಪೂಜೆಗಷ್ಟೇ ಸೀಮಿತವಾಯ್ತು. ದರ್ಶನಕ್ಕೆ ಅವಕಾಶ ಕೊಟ್ಟಿದ್ದೆವು.**

**ಎಚ್.ಎಸ್.ರುದ್ರಸ್ವಾಮಿ**, ನೂರೊಂದು ಗಣಪತಿ ಸೇವಾ ಟ್ರಸ್ಟ್‌ನ ಅಧ್ಯಕ್ಷ

ಈಚೆಗಿನ ದಶಕಗಳಲ್ಲಿ ಹಿಂದಿನ ವೈಭವ ಕ್ಷೀಣಿಸಿದೆ. ಶ್ರದ್ಧಾ–ಭಕ್ತಿಯ ಪೂಜೆ ಮಾತ್ರ ಎಂದಿನಂತೆ ಮುಂದುವರಿದಿದೆ' ಎಂದು ಶಾಸ್ತ್ರಿ ಹೇಳಿದರು.

'ದೇಗುಲ ಆರಂಭದ ಬಳಿಕವೂ ಮಣ್ಣಿನ ಗಣೇಶ ಪ್ರತಿಷ್ಠಾಪಿಸಿ, ಉತ್ಸವ ಆಚರಿಸುವುದು ಈ ಹಿಂದಿನಂತೆ ನಡೆದಿದೆ. ಆದರೆ ವೈಭವ ಕಡಿಮೆಯಾಗಿದೆ. ಮೊದಲು 15 ...

ಸುದ್ದಿ 2 ನಿಮಿಷ

# ಸಾಮಾಜಿಕ ಮೌಢ್ಯ ವಿರುದ್ಧ ಜನಜಾಗೃತಿ ಮೂಡಿಸಿ